



## ನವರಾತ್ರಿಯ ಸೊಬಗಿನ ಮೂಲ

ಗುರ್ಜರ ಭೂಮಿ, ಗುರ್ಜರತ್ರ ಎಂದು ಕರೆಯಲಾಗುತ್ತಿದ್ದ ನೆಲದ ಜನ ಗುಜರಾತಿಗಳು. ಮಧ್ಯ ಪ್ರಾಚ್ಯ ಹಾಗೂ ಸಮುದ್ರ ಮಾರ್ಗದಿಂದ ವ್ಯಾಪಾರ ಮಾಡುವಲ್ಲಿ ನಿಪುಣರಾಗಿದ್ದರು. ವ್ಯಾಪಾರಿಗಳು, ವಣಿಕರು ಜಗತ್ತಿನ ಎಲ್ಲೆಡೆಯೂ ಹರಡಿದ್ದಾರೆ.

ಕ್ರಿಸ್ತಪೂರ್ವ 2ನೇ ಶತಮಾನದಿಂದಾಚೆಯೂ ಗುರ್ಜರ ಇತಿಹಾಸ ಹರಡಿಕೊಂಡಿದೆ. ವ್ಯಾಪಾರ ವಾಣಿಜ್ಯದಲ್ಲಿ ಎತ್ತಿದ ಕೈ ಈ ಸಮುದಾಯದ್ದು. ಸಾಂಸ್ಕೃತಿಕವಾಗಿ ನವರಾತ್ರಿ ಗುಜರಾತಿನಲ್ಲಿ ಅತಿ ವೈಭವದಿಂದ ಆಚರಿಸಲಾಗುತ್ತದೆ. ದುಷ್ಟಶಿಕ್ಷೆ, ಶಿಷ್ಟ ರಕ್ಷಣೆಯೇ ಈ ಹಬ್ಬದ ಮುಖ್ಯ ಸಂದೇಶ. ಇಲ್ಲಿಯೂ ಮೊದಲು ಯುದ್ಧ ಕಲೆಯನ್ನು ವಿಜೃಂಭಿಸಲಾಗುತ್ತಿತ್ತು. ಕಾಲಕ್ರಮೇಣ ಖಡ್ಗದ ಬದಲಿಗೆ ಕೋಲುಗಳು ಬಂದವು. ದುರ್ಗಾದೇವಿ, ಚಾಮುಂಡೇಶ್ವರಿ, ಶಕ್ತಿ ಮಾತೆಯ ಆರಾಧನೆಯಲ್ಲಿ ವೈವಿಧ್ಯಮಯ ಬದಲಾವಣೆಗಳಾದವು.

ಜನನ, ಯೌವ್ವನ, ಮರಣಗಳ ನಿರಂತರ ಚಕ್ರ, ಏರಿಳಿತವನ್ನು ಸಂಕೇತಿಸುವುದೇ ಭೂಮಿಯಿಂದ ಭೂಮಿಗೆ, ಮಣ್ಣಿನಿಂದ ಮಣ್ಣಿಗೆ ತಲುಪುವಂಥ ಹೆಜ್ಜೆಗಳು ದಾಂಡಿಯಾ ನೃತ್ಯದಲ್ಲಿರುತ್ತವೆ. ಬದುಕಿನ ಪಯಣ ಸಂಕೇತಿಸುವುದು ಈ ನವರಾತ್ರಿಯಲ್ಲಿ ಗುರ್ಜರು, ಗುಜರಾತಿಗಳು ವಿಶೇಷವಾಗಿ ಆಚರಿಸುತ್ತಾರೆ. ಬ್ರಿಟಿಷ್ ಕಾಲದಲ್ಲಿ ಭಾರತದ ಎಲ್ಲೆಡೆ ವ್ಯಾಪಾರಿಗಳು ಹೆಚ್ಚು ಹೆಚ್ಚು ನೆಲೆಗಾಣುತ್ತಾರೆ. ಸಂಗೀತ ಮತ್ತು ನೃತ್ಯಕ್ಕೆ ಯಾವ ಸೀಮೆಯೂ ಇಲ್ಲ, ಎಲ್ಲೆಯೂ ಇಲ್ಲ ಎಂಬಂತೆ ಎಲ್ಲೆಡೆ ಈಗ ಕೋಲುಗಳ ಖಣಖಣ ಸದ್ದು, ಕೋಲಿಗೆ ಗೆಜ್ಜೆ ಕಟ್ಟಿ, ಖಣಖಣ ಸುದ್ದು ಬರುವಂತೆ ಮಾಡುತ್ತಾರೆ. ಆ ನಾದ, ನಿನಾದ ನವರಾತ್ರಿಯ ಸೊಬಗನ್ನು ಹೆಚ್ಚಿಸುತ್ತದೆ.

## ದಾಂಡಿಯಾ ಮತ್ತು ಗಾರ್ಭಾ

ಲಯ ಮತ್ತು ಸೃಷ್ಟಿ ಎರಡನ್ನು ಪ್ರತಿನಿಧಿಸುವ ನೃತ್ಯಗಳಿವು. ದಾಂಡಿಯಾದಲ್ಲಿ ಕೋಲುಗಳು ಖಡ್ಗಗಳ ಪ್ರತೀಕ. ಇಲ್ಲಿ ಪುರುಷರು ಮಹಿಷಾಸುರನಾದರೆ ಮಹಿಳೆಯರು ಚಾಮುಂಡೇಶ್ವರಿಯಾಗಿ ನರ್ತಿಸುತ್ತಾರೆ. ಕೋಲುಗಳ ಖಣಖಣ ಸದ್ದು ಖಡ್ಗಗಳ ಸದ್ದಿನಂತೆ ಬರಬೇಕು. ಅಲ್ಲಿ ಬರುವ ಹೆಜ್ಜೆಗಳು, ಪಟ್ಟುಗಳು ಚಾಮುಂಡೇಶ್ವರಿಯ ಮಹಿಮೆಯನ್ನೇ ಹೇಳುವಂತಿರುತ್ತವೆ. ಪ್ರತಿ ಕೋಲಿನ ಬಡಿತದಲ್ಲಿಯೂ ಮೇಲ್ಮೈ ಸಾಧಿಸುವುದು ಮಹಿಳೆಯರೇ ಆಗಿರುತ್ತಾರೆ. ವೃತ್ತಾಕಾರದಲ್ಲಿ ಸುತ್ತುತ್ತ ಮಾಡುವ ಈ ನೃತ್ಯಕ್ಕೆ ಪುರುಷರು ಗುಜರಾತಿ ಕುರ್ತಾ ಮತ್ತು ಧೋತಿಯಂತಿರುವ ಪೈಜಾಮಾ ಧರಿಸುತ್ತಾರೆ.

ಮಹಿಳೆಯರು ಕನ್ನಡಿಯ ಕಸೂತಿ ಇರುವ ಘಾಗ್ರಾ ಚೋಲಿಗಳನ್ನು ಧರಿಸುತ್ತಾರೆ. ಈ ಲಂಗಕ್ಕೆ ಘಾಗ್ರಾ ಎಂದು ಕರೆಯಲು ಕಾರಣ, ಇದರ ವಿನ್ಯಾಸವು ಘಾಗರ್‌ನಂತೆ ಇರುತ್ತದೆ. ಘಾಗರ್ ಎಂದರೆ ಮಡಕೆ ಎಂದರ್ಥ. ಮಣ್ಣಿನ ಮಡಕೆಯಂಥ ವಿನ್ಯಾಸದ ಈ ಲಂಗದಲ್ಲಿ ಸಾಕಷ್ಟು ಘೇರ್‌ಗಳಿರಬೇಕು. ವೃತ್ತಾಕಾರದಲ್ಲಿ ತಿರುಗಿದಾಗಲೆಲ್ಲ ಭೂಮಿಯು ತನ್ನ ಪಥದಲ್ಲಿ ತಿರುಗುತ್ತ, ತನ್ನ ಸುತ್ತ ತಿರುಗುವಂತೆಯೇ ಕಾಣಬೇಕು. ಇಂಥವೇ ಕೆಲವು ಸ್ಟೆಪ್ಪುಗಳು ಈ ನೃತ್ಯದಲ್ಲಿರುತ್ತವೆ.

## ಗಾರ್ಭಾ ನೃತ್ಯ

ಮಹಿಳೆಯರೇ ಮಾಡುವ ಈ ನೃತ್ಯದಲ್ಲಿ ಪುಟ್ಟದೊಂದು ಲಾಂಟೀನು ಅಥವಾ ದೀಪವನ್ನು ಹೊತ್ತಿಸಿಟ್ಟು ಸುತ್ತಲೂ ಮಹಿಳೆಯರು ನರ್ತಿಸುತ್ತಾರೆ. ಗಾರ್ಭಾ ಹೆಸರೇ ಹೇಳುವಂತೆ ಇದು ಗರ್ಭಗುಡಿಯನ್ನು ಪ್ರತಿನಿಧಿಸುತ್ತದೆ. ನಡುವೆ ಇಟ್ಟ ದೀಪವು ಜೀವಾಂಶದ ಪ್ರತೀಕವಾಗಿದೆ. ಸಾಮಾನ್ಯವಾಗಿ ಮಣ್ಣಿನ ಕುಡಿಕೆಯಲ್ಲಿ ದೀಪದ ಕುಡಿ ಹೊತ್ತಿಸಿಟ್ಟು ಸುತ್ತಲೂ ನರ್ತಿಸುತ್ತಾರೆ. ಇದು ಜೀವ, ಸಾವು, ಮತ್ತು ಮರುಹುಟ್ಟುಗಳ ಪ್ರತೀಕವಾಗಿದೆ ಎಂದು ನಂಬಿಕೆ ಇದೆ.

ಪುಟ್ಟ ದೀಪದ ಕುಡಿಯ ಸುತ್ತ ಕನ್ನಡಿಯ ಕಸೂತಿ ಇರುವ ಉಡುಗೆ ಧರಿಸಿ ನರ್ತಿಸುತ್ತಿದ್ದರೆ ದೀಪ ಪುಟ್ಟದಾಗಿದ್ದರೂ ಪ್ರತಿಫಲಿಸುತ್ತಿತ್ತು. ಜೀವದ ಬೆಳಕು ಎಲ್ಲರಲ್ಲಿಯೂ ಮೂಡಿದಂತೆ ಕಾಣುತ್ತಿತ್ತು.

ಕೆಲವೆಡೆ ದೀಪದ ಬದಲು ದುರ್ಗಾದೇವಿ ಪ್ರತಿಮೆಯನ್ನೂ ಇರಿಸಿ, ಸುತ್ತಲೂ ಸುತ್ತುತ್ತ ನರ್ತಿಸುತ್ತಾರೆ. ಸಾಮಾನ್ಯವಾಗಿ ಬಣ್ಣಬಣ್ಣದ ಉಡುಗೆಗಳನ್ನು ತೊಟ್ಟ ಮಹಿಳೆಯರು ತಾಯ್ತನವನ್ನು ಸಂಭ್ರಮಿಸುವಂತೆ ನರ್ತಿಸುತ್ತಾರೆ. ಇಲ್ಲಿ ತಾಯ್ತನದ ಶಕ್ತಿ ಮತ್ತು ಮಹಿಳೆಯರು ಜೀವಸೃಷ್ಟಿಯ ಕ್ರಿಯೆಯಲ್ಲಿ ದೇವರಂತೆ ಪಾತ್ರವಹಿಸುತ್ತಾರೆ, ಇವರನ್ನು ಗೌರವಿಸಬೇಕು ಎಂಬ ಸಂದೇಶವನ್ನು ಈ ನೃತ್ಯ ನೀಡುತ್ತದೆ. ಗುಜರಾತಿ ಗಾರ್ಭಾ ವಿಶೇಷ ಗೀತೆಗಳಲ್ಲಿ ಹಾಗೂ ಜನಪದ ಗೀತೆಗಳಲ್ಲಿ ಕೃಷ್ಣನನ್ನು ಸ್ತುತಿಸುವ, ದುರ್ಗೆಯನ್ನು ನಮಿಸುವ ಹಾಡುಗಳನ್ನೇ ಹಾಡುತ್ತಾರೆ. ಶಹನಾಯಿ, ಢೋಲು, ಸಾರಂಗಿ ಮತ್ತು ಹಾರ್ಮೋನಿಯಮ್ ಮೂಲ ವಾದ್ಯಗಳಾಗಿದ್ದವು. ಅವುಗಳೊಂದಿಗೆ ಜನಪದೀಯ ಭಕ್ತಿಗೀತೆಗಳನ್ನು ಹಾಡುತ್ತ, ನರ್ತಿಸುತ್ತಿದ್ದರು.

ಇದೀಗ ದಾಂಡಿಯಾ ಮತ್ತು ಗಾರ್ಭಾ ನವರಾತ್ರಿಯ ಇಳಿಸಂಜೆಯಿಂದ ಬೆಳಗಿನ ಜಾವದವರೆಗೂ ನಡೆಯುವ ಉತ್ಸವಗಳಾಗಿ ಬದಲಾಗಿವೆ. ಹಾಡುಗಳ ಬದಲಿಗೆ ಇಲ್ಲಿಯೂ ಬಾಲಿವುಡ್ ಸಿನಿಮಾ ಗೀತೆಗಳು ಡೀಜೆಯ ಅಬ್ಬರದಲ್ಲಿ ಮೊಳಗುತ್ತವೆ. ನವರಾತ್ರಿಯ ನವರಂಗು ಉಡುಗೆ ತೊಡುಗೆಗಳಲ್ಲಿ ಮೇಕಪ್‌ಗಳಲ್ಲಿ ಮಿಂಚುತ್ತಿದೆ.